3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 26/2020**

ಪ್ರಾಸಾ 4

ಚಾಸಾ 4

| | |
|---|---|
| ಹೆಸರು | ಶಂಕರಮ್ಮ |
| ಗಂಡನ ಹೆಸರು | ಲೇಟ್ ಚಂದ್ರಯ್ಯ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕಡಬಾ |

ಸಾಕ್ಷಿಯನ್ನು ದಿನಾಂಕ 26.06.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸುತ್ತೇನೆ. ಅವರು ಬರಸಿಡಿಲಹಳ್ಳಿಯವರು. ನಾವು ಆದಿಕರ್ನಾಟಕ ಮಾದಿಗ ಜಾತಿಗೆ ಸೇರಿರುತ್ತೇವೆ. ಆರೋಪಿ ಆಂಜನಪ್ಪ ರವರು ಮಡಿವಾಳ ಜಾತಿಗೆ ಸೇರಿದವರು. ಉಳಿದ ಆರೋಪಿಗಳು ಒಕ್ಕಲಿಗ ಜಾತಿಗೆ ಸೇರಿರುತ್ತಾರೆ. ಆರೋಪಿಗಳಿಗೆ ನಾವು ಯಾವ ಜಾತಿಯವರು ಎಂದು ಗೊತ್ತಿತ್ತು.

2) ಸಿಂಗದಹಳ್ಳಿ ಗ್ರಾಮದಲ್ಲಿ ನಮ್ಮದು ಸ.ನಂ.24 ರಲ್ಲಿ ಜಮೀನು ಇರುತ್ತದೆ. ಚಾಸಾ.1 ರವರು ನನ್ನ ಅಣ್ಣನ ಮಗಳು. ಚಾಸಾ.2 ನನ್ನ ತಮ್ಮನ ಹೆಂಡತಿ. ಚಾಸಾ.3 ರವರೂ ಸಹ ನನ್ನ ತಮ್ಮನ ಹೆಂಡತಿ. ಚಾಸಾ.5 ರವರು ನನ್ನ ಸಂಬಂಧಿ.

3) ಸುಮಾರು ಐದಾರು ವರ್ಷಗಳ ಹಿಂದೆ ಮಧ್ಯಾಹ್ನ 3 ಗಂಟೆಗೆ ನಮ್ಮ ಜಮೀನಿನಲ್ಲಿರುವ ಮನೆಯಲ್ಲಿದ್ದಾಗ ಆರೋಪಿಗಳೆಲ್ಲಾ ಚಾಸಾ.1 ರವರಿಗೆ ನಮ್ಮ ತಂದೆಯ ಅಡಿಕೆ ತೋಟದಲ್ಲಿ ಹೊಡೆಯುತ್ತಿದ್ದರು. ಆರೋಪಿಗಳಾದ ಬಸವರಾಜು ಅಲಿಯಾಸ್ ರಾಜಣ್ಣ ರವರು ಚಾಸಾ.1 ರವರ ಕೆನ್ನೆಗೆ ಹೊಡೆದು ಎದೆಗೆ ಗುದ್ದಿ ಮಾದಿಗಿತ್ತಿ, ನಿನ್ನನ್ನು ಹೊಡೆದು ಹಾಕುತ್ತೇನೆ, ಹೂತು ಹಾಕುತ್ತೇನೆ, ನಿಮ್ಮದೆಲ್ಲಿದೆ ಜಮೀನು, ನಮ್ಮದು ಎಂದು ಹೊಡೆದಿರುತ್ತಾರೆ.

4) ಆರೋಪಿ ಆಂಜನಪ್ಪರವರು ದೊಣ್ಣೆ ಹಿಡಿದುಕೊಂಡು ಚಾಸಾ.1 ರವರ ಬೆನ್ನಿಗೆ ಹೊಡೆದು ಮಾದಿಗಿತ್ತಿ ಮುಂಡೆ, ನಿಮ್ಮದೆಲ್ಲಿದೆ ಜಮೀನು, ನಮ್ಮದು ಜಮೀನು, ನಿಮಗೆ ಅವಮಾನ ಮಾಡುತ್ತೇವೆ, ಹೂತು ಹಾಕುತ್ತೇವೆ ಎಂದು ಬೈದಿರುತ್ತಾರೆ. ಆಗ ನಾನು, ಸಾವಿತ್ರಮ್ಮ, ಮೋಹನ ಮತ್ತು ನಾಗಮ್ಮ ರವರೆಲ್ಲಾ ಸೇರಿ ಆರೋಪಿಗಳಿಗೆ ಚಾಸಾ.1 ರವರನ್ನು ಏಕೆ ಹೊಡೆಯುತ್ತಿದ್ದೀಯಾ ಎಂದು ಕೇಳಿದೆವು. ಆಗ ಆರೋಪಿಗಳು ಜಮೀನು ನಿಮ್ಮದಲ್ಲ ಎಂದು ಕೆಟ್ಟ ಮಾತುಗಳಿಂದ ಬೈದಿರುತ್ತಾರೆ. ಆರೋಪಿಗಳು ನಮ್ಮನ್ನು ಊರಿನಿಂದ ಬಿಡಿಸುತ್ತೇವೆ, ಸಾಯಿಸುತ್ತೇವೆ ಎಂದು ಹೆದರಿಸಿರುತ್ತಾರೆ. ಆಗ ನಾವು ಹೆದರಿಕೊಂಡು ತೋಟದಿಂದ ಆಚೆ ಬಂದಿರುತ್ತೇವೆ. ನಂತರ ಚಾಸಾ.1 ರವರು ಘಟನೆಯ ಬಗ್ಗೆ ದೂರನ್ನು ನೀಡಿರುತ್ತಾರೆ. ನಂತರ ತುಮಕೂರಿನ ಡಿವೈ ಎಸ್ ಪಿ ರವರ ಕಚೇರಿಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

5) ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ವಸ್ತುಗಳಲ್ಲಿ ಒಂದು ಚಾಸಾ.1 ರವರ ನೈಟಿ ಮತ್ತು ಆಂಜನಪ್ಪ ರವರ ಹತ್ತಿರ ಇದ್ದ ದೊಣ್ಣೆ ಆಗಿರುತ್ತದೆ. ದೊಣ್ಣೆಯನ್ನು ಈಗಾಗಲೇ ಮು.ಮಾ.1 ಎಂದು, ನೈಟಿಯನ್ನು ಮು.ಮಾ 2 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ

ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ**

6) ನನ್ನ ತವರು ಮನೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಂದಿಕೆರೆ ಹೋಬಳಿಯ ಸಿಂಗದಹಳ್ಳಿ. ನನಗೆ ಇಬ್ಬರು ಮಕ್ಕಳು. ಅವರ ಹೆಸರು ರಂಗರಾಜು ಮತ್ತು ಪ್ರಕಾಶ್ ಎಂದರೆ ಸರಿ. ನನ್ನ ಗಂಡ ಚಂದ್ರಯ್ಯ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ಸ.ನಂ.24/1 ಎಫ್ ನಲ್ಲಿ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನನ್ನ ತಂದೆ ಸುಮಾರು 6 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಮಗೂ ಮತ್ತು ಆರೋಪಿಗಳಿಗೆ ಜಮೀನಿನ ಸ್ವಾಧೀನದ ವಿಚಾರದಲ್ಲಿ ವೈಷಮ್ಯ ಇರುತ್ತದೆ ಎಂದರೆ ಸರಿ. ದಿಃ12.10.2019 ರಂದು ಗಲಾಟೆ ಆಗಿರುತ್ತದೆ ಎಂದರೆ ಸರಿ. ಅಂದು ನಾನು ನಮ್ಮ ತೋಟಕ್ಕೆ ಹೋಗುತ್ತಿದ್ದೆ ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆಗ ಚಾಸಾ.1 ರವರೂ ಸಹ ತೋಟಕ್ಕೆ ಹೋಗುತ್ತಿದ್ದರು ಎಂದರೆಸ ರಿ. ಆಗ ಆರೋಪಿಗಳೆಲ್ಲರೂ ಬಂದಿರುತ್ತಾರೆ ಎಂದರೆ ಸರಿ. ಆಗ 1ನೇ ಆರೋಪಿ ಚಾಸಾ.1 ರವರಿಗೆ ಏಕೆ ನಮ್ಮ ತೋಟಕ್ಕೆ ಬಂದಿದ್ದೀಯಾ ಮಾದಿಗಮುಂಡೆ ಎಂದು ಜಾತಿ ನಿಂದನೆ ಮಾಡಿ ಬೈದಿರುತ್ತಾರೆ ಎಂದರೆ ಸರಿ.

7) ಆರೋಪಿ ಗಂಗಣ್ಣ ರವರು ಚಾಸಾ.1 ರವರನ್ನು ಕುರಿತು ಈ ಮಾದಿಗ ಮುಂಡೆಯನ್ನು ಅತ್ಯಾಚಾರ ಮಾಡಿ ಸಾಯಿಸಿ ಇಲ್ಲೇ ಹೂತು ಹಾಕೋಣ ಎಂದು ಕಿರುಚಾಡಿ ನೈಟಿಯನ್ನು ಹರಿದು ಹಾಕಿ ಕೈಯಿಂದ ಎದೆಯ ಹತ್ತಿರ ಗುದ್ದಿರುತ್ತಾರೆ ಎಂದರೆ ಸರಿ. ಆಗ ನಾವೆಲ್ಲಾ ಬಿಡಿಸಿಕೊಳ್ಳಲು ಹೋಗಿರುತ್ತೇವೆ ಎಂದರೆ ಸರಿ. ಆಗ ನಾನು

ಬಿಡಿಸಿಕೊಳ್ಳಲು ಹೋದಾಗ ಆರೋಪಿ ಜಯಣ್ಣರವರು ನನಗೆ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. ಕೈಗಳಿಂದ ಕುತ್ತಿಗೆಗೆ ಹೊಡೆದಿರುತ್ತಾರೆ ಎಂದರೆ ಸರಿ. ನನಗೂ ಸಹ ಮಾದಿಗಮುಂಡೆ ಎಂದು ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಎಂದರೆ ಸರಿ. ಆರೋಪಿ ಅಂಜನಪ್ಪರವರು ದೊಣ್ಣೆಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ ಅಂಜನಪ್ಪರವರು ದೊಣ್ಣೆಯಿಂದ ಸಾವಿತ್ರಮ್ಮ ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆಗ ನಾನು, ನಾಗಮ್ಮ ಮತ್ತು ಮೋಹನರವರು ಹೋಗಿ ಉಮಾದೇವಿ ಮತ್ತು ಸಾವಿತ್ರಮ್ಮರವರನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಆಂಜನಪ್ಪ ರವರು ಹೋಗುವಾಗ ದೊಣ್ಣೆಯನ್ನು ಸ್ಥಳದಲ್ಲಿಯೇ ಬಿಸಾಕಿ ಹೋದರು ಎಂದರೆ ಸರಿ. ನಂತರ ನಾವು ಉಮಾದೇವಿ ಸಾವಿತ್ರಮ್ಮರವರನ್ನು ಕರೆದುಕೊಂಡು ಹೋಗಿ ಮನೆಯ ಹತ್ತಿರ ಬಿಟ್ಟೆವು ಎಂದರೆ ಸರಿ. ನಂತರ ಉಮಾದೇವಿ ಮತ್ತು ಸಾವಿತ್ರಮ್ಮರವರಿಗೆ ಏಟಾಗಿದ್ದರಿಂದ ಚಿಕಿತ್ಸೆ ಪಡೆಯಲು ಚಿಕ್ಕನಾಯಕನಹಳ್ಳಿ ಆಸ್ಪತ್ರೆಗೆ ಹೋದರು ಎಂದರೆ ಸರಿ. ಈ ರೀತಿಯಾಗಿ ನಾನು ಪೊಲೀಸರು ಕೇಳಿದಾಗ ಹೇಳಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :**

(ಪಾಟೀಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ